
ಸೈಯದ್ ಈಡೇರಿಸಲಾರ. ಅವನಿಗೆ ಬಸ್ ಹತ್ತುವ ಮಗುವೊಂದು ಕಾಣಿಸಿದ್ದೇ ಮನಸ್ಸು ಕಂಪಿಸತೊಡಗುತ್ತದೆ. ನೋಡುಗರಾದ ನಮ್ಮ ಮನಸ್ಸಿನಲ್ಲಿ ಕಂಪನ ಮೂಡದೇ ಅದನ್ನು ಮೂರನೆಯವರಾಗಿಯೇ ನೋಡುವಂತೆ ತೋರುವುದು ಕೂಡ ನಿರ್ದೇಶಕರ ಮೈಮರೆಸಕೂಡದು ಎಂಬ ಪ್ರಜ್ಞೆಗೆ ಸಾಕ್ಷಿ.

## ಕಟ್ಟುವಿಕೆಯ ಕುತೂಹಲ

ಗೆಳೆಯರ ಆತ್ಮೀಯತೆಯನ್ನು ಗ್ಯಾರೇಜ್‌ನ ಪರಿಸರದಲ್ಲಿ ತೋರುವ ಸಿನಿಮಾದಲ್ಲಿ ಅಳೆದು ತೂಗಿದಂತೆ ಬರೆದ ಸಂಭಾಷಣೆ ಇದೆ. ಆ ಸ್ನೇಹಿತರು ಧರ್ಮಾಂಧರಲ್ಲ, ದೈವಭಕ್ತರೂ ಅಲ್ಲ. ಇಸ್ರೇಲ್‌ಗೆ ನುಗ್ಗುವ ಮನಸ್ಸು ಮಾಡಲು ಇಬ್ಬರಿಗೂ ಪ್ರತ್ಯೇಕ ಕಾರಣಗಳಿವೆ. ಆತ್ಮಹತ್ಯಾ ಬಾಂಬ್‌ಗಳಾಗಲು ಸಿದ್ಧರಾಗುವ ಅವರ ಮನಸ್ಥಿತಿ ಹಾಗೂ ತಾಕಲಾಟಗಳನ್ನು ಅತಿ ಹಿತವೂ ಅರ್ಥಪೂರ್ಣವೂ ಆದ 'ಕಾಮಿಕ್ ರಿಲೀಫ್' ಇಟ್ಟು ಚಿತ್ರಕಥೆ ಹೆಣೆದಿರುವುದು ಆಸಕ್ತಿಕರ.


'ಪ್ಯಾರಡೈಸ್ ನೌ' ಚಿತ್ರದ ದೃಶ್ಯ

ಸಿನಿಮಾ ಸಣ್ಣ ಸಣ್ಣ ವಿವರಗಳ ಕಟ್ಟುವಿಕೆಯಲ್ಲೇ ಕುತೂಹಲ ಮೂಡಿಸುತ್ತದೆ. ಅದು ಭಯ ಬೆರೆತ ಕುತೂಹಲವಾಗುವುದು ಕೂಡ ನೋಡುವ ನಮ್ಮಂಥವರು ಬೆಳೆದ ಪರಿಸರದಿಂದಾಗಿ. ಈ ಸಿನಿಮಾದ ವಿಶೇಷ ಇರುವುದೇ ಹೀಗೆ ಒಬ್ಬೊಬ್ಬರಿಗೆ ಅವರವರ ಸಮಾಜೋ ಸಾಂಸ್ಕೃತಿಕ ಹಿನ್ನೆಲೆಯ ದೃಷ್ಟಿಯಿಂದ ದಕ್ಕುವುದರಲ್ಲಿ.

ಉಗ್ರರು, ಭಯೋತ್ಪಾದಕರನ್ನು ಕುರಿತು ನಮ್ಮ ನಮ್ಮಲ್ಲಿ ರೂಪಿತವಾಗಿರುವ ನಿರ್ದಿಷ್ಟ ಅಭಿಪ್ರಾಯವನ್ನು ಕೆದಕುತ್ತಾ, ಅವರ ಬದುಕಿನ ವಾಸ್ತವಕ್ಕೆ ಒಂದು ಕಡೆ ಸಿನಿಮಾ ಕನ್ನಡಿ ಹಿಡಿಯುತ್ತದೆ. ಅದು ತೀರ್ಮಾನ ಕೊಡಲು ಹೋಗುವುದಿಲ್ಲ. ಇದುವೇ ಸಹೃದಯರ ನಡುವೆ ಅರ್ಥಪೂರ್ಣ ಸಂವಾದ ಹುಟ್ಟುಹಾಕಲು ಕಾರಣವಾಗುವ ಮಾರ್ಗ.

ಮಾನವ ಬಾಂಬ್‌ಆಗಿ ಯುವಕರು ರೂಪಿತಗೊಳ್ಳುವ ಕ್ರಮದಲ್ಲೇ ಹಲವು ದೇಶಗಳ ಜನರ ಪರಿಕಲ್ಪನೆಯನ್ನು ಒಡೆಯುವ ಕಸುವು ಇದೆ. ಯಾವುದೋ ಒಂದು ಕಠಿಣವಾದ ಕೆಲಸವನ್ನು ನಿರ್ವಹಿಸಲು ಕೊಟ್ಟಿರುವ ಭಾವದಲ್ಲಿ ಅವರು ಮಾನವ ಬಾಂಬ್‌ಆಗುವುದನ್ನು ನೋಡುವಾಗ ನಮ್ಮ ಮನದಲ್ಲೂ ಅಪರೂಪದ ಅಲೆಗಳು ಏಳುತ್ತವೆ. ಅವರನ್ನು ಮಾನವ ಬಾಂಬ್‌ಆಗಿಸುವ ಸಂಸ್ಥೆಯು ತರಬೇತಿ ನೀಡುತ್ತದೆ. ಪ್ರೋತ್ಸಾಹ ಕೊಡುತ್ತದೆ. ಹೊಗಳುತ್ತದೆ. ಗಡ್ಡ ಬೋಳಿಸಿ, ಕೂದಲು ಕತ್ತರಿಸಿಕೊಳ್ಳುವ ವ್ಯವಸ್ಥೆಯನ್ನೂ ಮಾಡಿಸುತ್ತದೆ. ಸೂಟು–ಬೂಟು–ಟೈ ಕೊಡುತ್ತದೆ. ಒಂದು ಔತಣ ನೀಡಿ, ತಮ್ಮ ಅಂತಿಮ ಸಂದೇಶದ ವಿಡಿಯೊ ದಾಖಲಿಸುವ ಅವಕಾಶವನ್ನೂ ಕಲ್ಪಿಸುತ್ತದೆ.